# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –94/2019

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸ್ವಾಮಿ | ಪ್ರಾಸಾ: | 04 |
| ತಂದೆ ಹೆಸರು | : | ಸಿಂಗ್ರೀಗೌಡ | ಚಾಸಾ: | 15 |
| ವಯಸ್ಸು | : | 38 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:24.01.2025 | |
| ವೃತ್ತಿ | : | ಗಾರೆ ಕೆಲಸ | | |
| ವಾಸ ಸ್ಥಳ | : | ಎರಗನಹಳ್ಳಿ | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ಮೊದಲಿಗೆ ನಾನು ಮಾದೇಗೌಡನ ಹುಂಡಿಯಲ್ಲಿ ವಾಸವಿದ್ದೆ. ಚಾಸಾ–16 ಪ್ರದೀಪ ಗೊತ್ತು. ಆರೋಪಿ ಗೊತ್ತಿಲ್ಲ. ಈ ಕೇಸಿನ ವಿಚಾರ ನನಗೆ ಏನು ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ನಾನು ಸಹಿಯನ್ನು ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಹಾಕಿದ್ದೇನೆ. ಆ ದಾಖಲೆಗೆ ನಾನು ಮತ್ತು ಚಾಸಾ–16 ಸಹಿ ಮಾಡಿದ್ದೇವೆ. ಯಾವ ಕಾರಣಕ್ಕೆ ಪೊಲೀಸರು ನನ್ನ ರುಜುವನ್ನು ತೆಗೆದುಕೊಂಡಿದ್ದಾರೆ ಎನ್ನುವುದು ಗೊತ್ತಿಲ್ಲ. ಅ ದಾಖಲೆಯಲ್ಲಿ ಏನು ಬರೆದಿದೆ ಎನ್ನುವುದು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಹಾಗೂ ಒಂದು ಚೀಟಿಯ ಮೇಲೆ ನನ್ನ ಸಹಿಯನ್ನು ತೆಗೆದುಕೊಂಡಿರುವುದಿಲ್ಲ. ಅಮಾನತ್ತು ಮಹಜರ್ ನ್ನು ಈಗಾಗಲೇ ನಿಪಿ.6 ಎಂಬುದಾಗಿ ಗುರುತಿಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

2. ಈಗ ನನಗೆ ತೋರಿಸಿದ ಮತ್ತೇರಡು ದಾಖಲೆ ಮೇಲೆ ನನ್ನ ರುಜು ಇದೆ. ಯಾವ ಕಾರಣಕ್ಕೆ ಅ ರುಜು ಮಾಡಿದ್ದೇನೆ ಎನ್ನುವುದು ಗೊತ್ತಿಲ್ಲ. ಪೊಲೀಸ್ ನೋಟೀಸ್ ನ್ನು

ನಿಪಿ.20 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಮುಚ್ಚಳಿಕೆಯನ್ನು ನಿಪಿ.21 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು.

**(ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ**

3. ದಿಃ 23.08.2018 ರಲ್ಲಿ ನಿಪಿ.6 ರಂತೆ ಸಂಜೆ 4.30 ರಿಂದ 5.30 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-16 ರವರ ಸಮಕ್ಷಮ ಪಿರ್ಯಾಧಿಯು ಹಾಜರುಪಡಿಸಿದ ಮೃತೆ ತೇಜಸ್ವಿನಿಯು ಬದುಕಿದ್ದಾಗ, ಆಕೆಯು ತಾನು ಬರೆದು ಒಂದು ಪರ್ಸ್ ನಲ್ಲಿ ಇಟ್ಟಿದ್ದಂತಹ 2 ಚೀಟಿಗಳು ಮೃತೆಯು ನೇಣುಹಾಕಿಕೊಂಡ ಮನೆಯಲ್ಲಿ ಸಿಕ್ಕಿದ್ದನ್ನು ತನ್ನ ಭಾವ ಕುಮಾರ್ ರವರ ಮನೆಯಲ್ಲಿ ಇಟ್ಟಿದ್ದನ್ನು ತಂದು ಹಾಜರುಪಡಿಸಿದಾಗ ಅದನ್ನು ಪೊಲೀಸರು ನಮ್ಮ ಸಮಕ್ಷಮ ಸೀಲ್ ಮಾಡಿ ನನ್ನ ಹಾಗೂ ಚಾಸಾ-16 ರವರ ಸಹಿಗಳನ್ನು ಒಂದು ಚೀಟಿಯಲ್ಲಿ ಪಡೆದು ಅದರ ಮೇಲೆ ಅಂಟಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.6 ಅಂಶಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.8 ಮತ್ತು 9 ರ ಚೀಟಿಗಳನ್ನು ನಿಪಿ.6 ರ ಅಡಿಯಲ್ಲಿ ಅಮಾನತ್ತು ಪಡಿಸಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಸಲುವಾಗಿ ಪೊಲೀಸರು ನನಗೆ ನಿಪಿ.20 ರಂತೆ ನೋಟೀಸ್ ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಸಾಕ್ಷಿ ನುಡಿಯುವ ಸಲುವಾಗಿ ನಿಪಿ.21 ರಂತೆ ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ನಿಪಿ.22 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ

ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ</u>

ಇಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆ ಃ ಇಲ್ಲ</u>

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು